ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ,

ಸಂಖ್ಯೆ: ಬಿಟೆಇ/14/ಇಎಫ್ಎಸ್/2023-24

ಆಯುಕ್ತರ ಕಚೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ:05-09-2023.

## ಸುತ್ತೋಲೆ

**ವಿಷಯ:** ತಾಂತ್ರಿಕ ಪರೀಕ್ಷಾ ಮಂಡಳಿಯ ಇಸಿಎಸ್ ವಿಭಾಗದ ಉಗ್ರಾಣ ಹಾಗೂ 14 ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯ ಮಾಪನಗೊಂಡು ಶೇಖರಿಸಿರುವ ಇಟ್ಟಿರುವ ಉತ್ತರ ಪತ್ರಿಕೆಗಳು/ ಡ್ರಾಯಿಂಗ್ ಶೀಟ್/ಲಕೋಟೆಗಳು/ಪ್ರಶ್ನೆ ಪತ್ರಿಕೆಗಳು ಮತ್ತು ನಮೂನೆಗಳನ್ನು ವಿಲೇ ಮಾಡಿ ಪಲ್ಪ್ ಗೆ ಕಳುಹಿಸಲು ಅಂದಾಜು ತೂಕವನ್ನು ನಿಗದಿತ ಗೂಗಲ್ ನಮೂನೆಯಲ್ಲಿ ಭರ್ತಿ ಮಾಡಿ ಕಳುಹಿಸುವ ಬಗ್ಗೆ

**ಉಲ್ಲೇಖ:** 1) ವಿ.ಐ.ಎಸ್.ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ ಇವರ ಪತ್ರ ದಿನಾಂಕ:08-06-2023
2) ಶ್ರೀ ಪುರುಷೋತ್ತಮ, ಅಧೀಕ್ಷಕರು, ಇಸಿಎಸ್ ವಿಭಾಗ ಇವರ ಸಲ್ಲಿಕೆ ದಿನಾಂಕ:10-07-2023

********

ಉಲ್ಲೇಖದ ಪತ್ರ ಹಾಗು ಸಲ್ಲಿಕೆಯಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿಯ ಇಸಿಎಸ್ ವಿಭಾಗದ ಉಗ್ರಾಣ ಮತ್ತು ರಾಜ್ಯದ 14 ನೋಡಲ್ ಕೇಂದ್ರಗಳಲ್ಲಿಯೂ 2017ರ ನವೆಂಬರ್/ಡಿಸೆಂಬರ್, 2020ರ ಏಪ್ರಿಲ್/ಮೇ, 2020ರ ನವೆಂಬರ್/ಡಿಸೆಂಬರ್, 2021ರ ಏಪ್ರಿಲ್/ಮೇ, 2021ರ ನವೆಂಬರ್/ಡಿಸೆಂಬರ್, 2022ರ ಏಪ್ರಿಲ್/ಮೇ, ಮತ್ತು 2022ರ ನವೆಂಬರ್/ಡಿಸೆಂಬರ್ ಪರೀಕ್ಷೆಯ ಮೌಲ್ಯಮಾಪನ ಮತ್ತು ಮರು ಮೌಲ್ಯಮಾಪನ, ಮತ್ತು ತಡೆ ಹಿಡಿಯಲಾದ ಫಲಿತಾಂಶ ಪ್ರಕಟಿಸುವ ಎಲ್ಲಾ ಕಾರ್ಯಗಳು ಮುಕ್ತಾಯಗೊಂಡಿರುವ ಉತ್ತರ ಪತ್ರಿಕೆಗಳು/ಡ್ರಾಯಿಂಗ್ ಶೀಟ್/ಲಕೋಟೆಗಳು/ಪ್ರಶ್ನೆ ಪತ್ರಿಕೆಗಳು ಮತ್ತು ನಮೂನೆಗಳನ್ನು ಶೇಖರಿಸಿ ಇಡಲಾಗಿದೆ. ಮಂಡಳಿಯ ಉಗ್ರಾಣದಲ್ಲಿ ಮತ್ತು 14 ನೋಡಲ್ ಕೇಂದ್ರಗಳಲ್ಲಿ ಸ್ಥಳವಾಕಾಶದ ಕೊರತೆ ಇರುವ ಕಾರಣ ಈ ಉತ್ತರ ಪತ್ರಿಕೆಗಳು ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ವಿಲೇ ಮಾಡಿ ಪಲ್ಪ್ ಗೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ. ಆದ್ದರಿಂದ ಈ ಸಂಬಂಧ ಇ-ಹರಾಜು ಪ್ರಕ್ರಿಯೆ ಕೈಗೊಳ್ಳಲು ಮಂಡಳಿಯ ಉಗ್ರಾಣ ಹಾಗು ಮೌಲ್ಯ ಮಾಪನ ಕೇಂದ್ರಗಳಲ್ಲಿ ವಿಲೇ ಮಾಡಲು ಶೇಖರಿಸಿಟ್ಟಿರುವ ಉತ್ತರ ಪತ್ರಿಕೆಗಳು ಮತ್ತು ಇತರೆ ಲೇಖನ ಸಾಮಗ್ರಿಗಳ ಅಂದಾಜು ತೂಕ ನಮೂದಿಸಬೇಕಾಗಿರುವುದರಿಂದ, ಈ ಕೆಳಕಂಡ ನಿಗದಿತ ಗೂಗಲ್ ನಮೂನೆಯಲ್ಲಿ ಅಂದಾಜು ತೂಕವನ್ನು ನಮೂದಿಸಿ **ದಿ:07-09-2023** ರೊಳಗೆ ಕಳುಹಿಸುವಂತೆ ಈ ಮೂಲಕ ರಾಜ್ಯದ ಎಲ್ಲಾ ಮೌಲ್ಯಮಾಪನ ಕೇಂದ್ರಗಳ ಪ್ರಾಂಶುಪಾಲರು ಮತ್ತು ಮಂಡಳಿಯ ಇಸಿಎಸ್ ವಿಭಾಗ ಇವರು ಕ್ರಮ ವಹಿಸಲು ತಿಳಿಸಲಾಗಿದೆ.

**Google Link : https://forms.gle/jPJj1Ar9L4EFwwxn8**

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.

ಇವರಿಗೆ:

ಎಲ್ಲಾ ಮೌಲ್ಯಮಾಪನ ಕೇಂದ್ರಗಳ, ಪ್ರಾಂಶುಪಾಲರುಗಳಿಗೆ ಇಲಾಖಾ ಜಾಲತಾಣ ಮುಖಾಂತರ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು/ಹಿರಿಯ ತಾಂತ್ರಿಕ ಸಹಾಯಕರು/ರಿಜಿಸ್ಟ್ರಾರ್(ಪರೀಕ್ಷೆ)
2. ಇ-ಆಡಳಿತ ವಿಭಾಗಕ್ಕೆ ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ.
3. ಕಚೇರಿ ಪ್ರತಿ.